# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯಸದಸ್ಯರಹೆಸರು | : ಶ್ರೀ ಐವನ್ ಡಿ'ಸೋಜಾ |
| ಚುಕ್ಕೆಗುರುತಿಲ್ಲದಪ್ರಶ್ನೆಸಂಖ್ಯೆ | : 21 |
| ಉತ್ತರಿಸಬೇಕಾದದಿನಾಂಕ | : 05.03.2025 |
| ಉತ್ತರಿಸಬೇಕಾದಸಚಿವರು | : ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರಕಲ್ಯಾಣಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಗೆ 2022-23, 2023-24 ಮತ್ತು 2024-25ರ ಸಾಲಿನಲ್ಲಿ ಹಂಚಿಕೆ ಮಾಡಲಾದ ಒಟ್ಟು ಮನೆಗಳ ಸಂಖ್ಯೆ ಹಾಗೂ ಸಂಪೂರ್ಣಗೊಂಡ ಮನೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು. | ದಕ್ಷಿಣ ಕನ್ನಡ ಜಿಲ್ಲೆಗೆ 2022-23, 2023-24 ಮತ್ತು 2024-25ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಗಳಡಿ ಒಟ್ಟು 409 ಮನೆಗಳನ್ನು ಮಂಜೂರು ಮಾಡಲಾಗಿದ್ದು, ಈ ಪೈಕಿ 131 ಮನೆಗಳು ಪೂರ್ಣಗೊಂಡಿದ್ದು, 79 ಮನೆಗಳು ವಿವಿಧ ಹಂತದ ಪಗ್ರತಿಯಲ್ಲಿರುತ್ತದೆ. ಇನ್ನು 196 ಮನೆಗಳು ಪ್ರಾರಂಭವಾಗಬೇಕಿರುತ್ತದೆ. 3 ಮನೆಗಳನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿರುತ್ತದೆ.<br><br>ಕೇಂದ್ರ ಪುರಸ್ಕೃತ ಯೋಜನೆಯಾದ ಪ್ರಧಾನ ಮಂತ್ರಿ ಆವಾಸ್ ಯೋಜನೆ-ಗ್ರಾಮೀಣ ಹಾಗೂ PM-JANAMAN ಯೋಜನೆಯಡಿ 32 ಮನೆಗಳನ್ನು ಮಂಜೂರು ಮಾಡಲಾಗಿದ್ದು, 9 ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತದೆ ಇನ್ನು 23 ಮನೆಗಳು ಪ್ರಾರಂಭವಾಗಬೇಕಿರುತ್ತದೆ. ಯೋಜನಾವಾರು ವಿವರ ಇಂತಿದೆ. |

| ಯೋಜನ | ಶ್ರೇಣಿ | ಮಂಜೂರಾದ ಮನೆಗಳು | ಪೂರ್ಣಗೊಂಡ ಮನೆಗಳು | ಪ್ರಗತಿ ಯಲ್ಲಿರುವ ಮನೆಗಳು | ಪ್ರಾರಂಭ ವಾಗದ ಮನೆಗಳು | ಬ್ಲಾಕ್/ತಾತ್ಕಲಿಕವಾಗಿ ತಡೆಹಿಡಿಯಲಾದ ಮನೆಗಳು |
|---|---|---|---|---|---|---|
| ಬಸವ ವಸತಿ ಯೋಜನೆ | 2022-23 | 158 | 0 | 32 | 125 | 1 |
| ಡಾ\|ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ(ಗ್ರಾ) | 2022-23 | 54 | 0 | 13 | 39 | 2 |
| PM-Janman | 2023-24 | 23 | 0 | 9 | 14 | 0 |
| ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾ) | 2024-25 | 9 | 0 | 0 | 9 | 0 |
| ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ)-BLC Non convergence | 2022-23 | 112 | 96 | 14 | 2 | 0 |
| | 2023-24 | 53 | 35 | 11 | 7 | 0 |
| ಒಟ್ಟು | | 409 | 131 | 79 | 196 | 3 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಸದರಿ ಜಿಲ್ಲೆಯಲ್ಲಿ ಕೆ.ಡಿ.ಪಿ. ಸಭೆಯಲ್ಲಿ ಕಳೆದ 5 ವರ್ಷಗಳಿಂದ ವಸತಿ ಇಲಾಖೆಯಿಂದ ಮನೆಗಳು ಹಂಚಿಕೆಯಾಗಿಲ್ಲ ಎಂಬ ಮಾಹಿತಿ ನೀಡಿರುವುದು ನಿಜವೇ; ಈ ಬಗ್ಗೆ ಇಲಾಖೆ ಮುಂದಿರುವ ದಾಖಲೆಗಳಾವುವು (ವಿವರ ನೀಡುವುದು) | 2020-21ನೇ ಸಾಲಿನಿಂದ ಇಲ್ಲಿಯವರೆಗೆ ವಿವಿಧ ವಸತಿ ಯೋಜನೆಗಳಡಿ ದಕ್ಷಿಣ ಕನ್ನಡ ಜಿಲ್ಲೆಗೆ ಒಟ್ಟು 9,754 ಮನೆಗಳನ್ನು ಮಂಜೂರು ಮಾಡಿ ಕಾಮಗಾರಿ ಆದೇಶ ನೀಡಲಾಗಿದೆ. ಯೋಜನಾವಾರು ವಿವರ ಈ ಕೆಳಕಂಡಂತಿದೆ. |

| ಯೋಜನೆ | ಶ್ರೇಣಿ | ಮಂಜೂರಾದ ಮನೆಗಳು | ಪೂರ್ಣಗೊಂಡ ಮನೆಗಳು | ಪ್ರಗತಿ ಯಲ್ಲಿರುವ ಮನೆಗಳು | ಪ್ರಾರಂಭ ವಾಗದ ಮನೆಗಳು | ತಾತ್ಕಾಲಿಕವಾಗಿ ತಡೆಹಿಡಿಯಲಾದ ಮನೆಗಳು |
|---|---|---|---|---|---|---|
| ದೇವರಾಜ ಅರಸು ವಸತಿ ಯೋಜನೆ | 2020-21 | 1 | 1 | 0 | 0 | 0 |
| ಬಸವ ವಸತಿ ಯೋಜನೆ | 2021-22 | 5978 | 4637 | 703 | 83 | 555 |
| | 2022-23 | 158 | 0 | 32 | 125 | 1 |
| ಡಾ\|ಬಿ.ಆರ್. ಅಂಬೇಡ್ಕರ್ | 2021-22 | 1957 | 1294 | 415 | 58 | 190 |

| | | | | | | |
|---|---|---|---|---|---|---|
| ವಸತಿ ಯೋಜನೆ(ಗ್ರಾ) | 2022-23 | 54 | 0 | 13 | 39 | 2 |
| ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾ) | 2021-22 | 229 | 87 | 93 | 49 | 0 |
| | 2024-25 | 9 | 0 | 0 | 9 | 0 |
| PM-Janman | 2023-24 | 23 | 0 | 9 | 14 | 0 |
| ಡಾ\|ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ(ನಗರ) | 2021-22 | 179 | 62 | 66 | 9 | 42 |
| ವಾಜಪೇಯಿ ನಗರ ವಸತಿ ಯೋಜನೆ | 2021-22 | 692 | 402 | 147 | 6 | 137 |
| ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ)-BLC Non convergence | 2021-22 | 309 | 226 | 56 | 27 | 0 |
| | 2022-23 | 112 | 96 | 14 | 2 | 0 |
| | 2023-24 | 53 | 35 | 11 | 7 | 0 |
| ಒಟ್ಟು | | 9754 | 6840 | 1559 | 428 | 927 |

| | |
|---|---|
| ಇ) | ವಸತಿ ಇಲಾಖೆಯಿಂದ ನಿರ್ಮಾಣ ಮಾಡುತ್ತಿರುವ ಮನೆಗಳನ್ನು ಯಾವ ಮಾನದಂಡಗಳಲ್ಲಿ ಹಂಚಿಕೆ ಮಾಡಲಾಗುತ್ತಿದೆ. |

ವಸತಿ ಇಲಾಖೆಯ ವಿವಿಧ ಗ್ರಾಮೀಣ ಯೋಜನೆಗಳಡಿ ಹಂಚಿಕೆ ಮಾಡುವ ಮನೆಗಳನ್ನು ಪಡೆಯಲು ನಿಗಧಿಪಡಿಸಿರುವ ಮಾನದಂಡಗಳು ಈ ಕೆಳಕಂಡಂತಿವೆ.

- ಅರ್ಜಿದಾರರು ಕಡ್ಡಾಯವಾಗಿ ಮಹಿಳೆಯಾಗಿರಬೇಕು(ವಿವಾಹಿತ ಅಥವಾ ಏಕ ಮಹಿಳಾ ಒಡೆತನದ ಗೃಹಣಿ) ಮಾಜಿ ಯೋಧರು, ವಿಧುರರು, ಅಂಗವಿಕಲರು ಮತ್ತು ಹಿರಿಯ ನಾಗರೀಕರಾಗಿದ್ದಲಿ ಪುರುಷರು ಸಹಾ ಅರ್ಹರಾಗಿರುತ್ತಾರೆ.
- ಅರ್ಜಿದಾರರ ಕುಟುಂಬವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು ಗ್ರಾಮೀಣ ಪ್ರದೇಶದವರಾಗಿದ್ದಲ್ಲಿ ರೂ.1,20,000/-ಕ್ಕಿಂತ ಕಡಿಮೆ ಇರಬೇಕು ನಗರ ಪ್ರದೇಶದಲ್ಲಿ ರೂ.2,00,000/-ರ ಒಳಗಿರಬೇಕು.
- ಅರ್ಜಿದಾರರ ಕುಟುಂಬವು ವಸತಿ ರಹಿತರಾಗಿದ್ದು, ಅರ್ಜಿದಾರರು ಅಥವಾ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಕರ್ನಾಟಕದ ಯಾವುದೇ ಭಾಗದಲ್ಲಿ ಸ್ವಂತ ಮನೆಯನ್ನು ಹೊಂದಿರಬಾರದು, ಶಿಥಿಲಗೊಂಡ ಮನೆ ಅಥವಾ ಗುಡಿಸಲಿನಲ್ಲಿ ವಾಸಿಸುತ್ತಿರುವವರು ಅರ್ಹರಾಗಿರುತ್ತಾರೆ.
- ಅರ್ಜಿದಾರರು ಸ್ವಂತ ನಿವೇಶನ ಹೊಂದಿದ್ದು, ನಿವೇಶನಕ್ಕೆ ಸಂಬಂಧಿಸಿದಂತೆ ಖಾತೆ ಹೊಂದಿರಬೇಕು(ಪಾರಂಪರಿಕ ಅರಣ್ಯ ಹಕ್ಕುಗಳ ಕಾಯ್ದೆಯನ್ವಯ ಜಿಲ್ಲಾ ಸಮಿತಿಯಿಂದ ನೀಡಲಾದ ಹಕ್ಕುಪತ್ರ ಪಡೆದಿದ್ದಲ್ಲಿ ವಸತಿ ಸೌಕರ್ಯ ಪಡೆಯಲು ಪರಿಗಣಿಸಬಹುದಾಗಿದೆ.)
- ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲ್ಯ ಪಡೆದಿರಬಾರದು.
- ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾ)ಯಡಿ ವಸತಿ ಸೌಲಭ್ಯ ಪಡೆಯಲು ಕೇಂದ್ರ ಸರ್ಕಾರದಿಂದ ನೀಡಲಾದ ಸಾಮಾಜಿಕ ಆರ್ಥಿಕ ಮತ್ತು ಜಾತಿ ಜನಗಣತಿ 2011ರ ಪಟ್ಟಿಯಲ್ಲಿ ಹೆಸರು ಸೇರಿರಬೇಕು.
- ಡಾ|ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿ ವಸತಿ ಸೌಲಭ್ಯ ಪಡೆಯಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರಬೇಕು. ಈ ವರ್ಗದ ವಸತಿ ರಹಿತರಿಗೆ ಬೇಡಿಕೆ ಆಧಾರಿತವಾಗಿ ವಸತಿ ಕಲ್ಪಿಸಲಾಗುವುದು.

**ಪ್ರಧಾನ ಮಂತ್ರಿ ನಿವಾಸ್ ಯೋಜನೆ(ನಗರ)ಯಡಿ ಫಲಾನುಭವಿಗಳನ್ನು ಗುರುತಿಸಲು/ಆಯ್ಕೆ ಮಾಡುವ ಮಾನದಂಡ ಈ ಕೆಳನಂತಿವೆ**

- ಫಲಾನುಭವಿಯು ಬೇಡಿಕೆ ಸಮೀಕ್ಷೆಯಲ್ಲಿರಬೇಕು.
- ದೇಶದಾದ್ಯಂತ ಅವನ/ಅವಳ ಹೆಸರಿನಲ್ಲಿ ಯಾವುದೇ ಮನೆ ಇರಬಾರದು.
- ವಾರ್ಷಿಕ ಆದಾಯ 3 ಲಕ್ಷಕ್ಕಿಂತ ಕಡಿಮೆ ಇರಬೇಕು.
- ಇತರ ವಸತಿ ಯೋಜನೆಗಳಲ್ಲಿ ಈಗಾಗಲೇ ಸಹಾಯಧನ ಪಡೆದಿರಬಾರದು.
- ಫಲಾನುಭವಿಯು ಸ್ವಂತ ನಿವೇಶನ ಹೊಂದಿರಬೇಕು.

| | | |
|---|---|---|
| ಈ) | ದಕ್ಷಿಣ ಕನ್ನಡ ಜಿಲ್ಲೆಯಿಂದ ಮನೆ ಹಂಚಿಕೆಗೆ ಬಂದಿರುವ ಬೇಡಿಕೆಗಳು ಎಷ್ಟು? (ವಿವರ ನೀಡುವುದು) | 2011ರ SECC ಸಮೀಕ್ಷೆಯಲ್ಲಿ ಕೈಬಿಟ್ಟು ಹೋದ ಅರ್ಹ ಫಲಾನುಭವಿಗಳನ್ನು ಮತ್ತೊಮ್ಮೆ ಶಾಶ್ವತಪಟ್ಟಿಗೆ ಸೇರಿಸಲು, 2018ರಲ್ಲಿ ಕೇಂದ್ರ ಸರ್ಕಾರದ ಮಾರ್ಗದರ್ಶನ ಅನ್ವಯ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ವಸತಿ/ನಿವೇಶನ ರಹಿತರ ಸಮೀಕ್ಷೆ ಕೈಗೊಳ್ಳಾಗಿದ್ದು, ಸದರಿ ಸಮೀಕ್ಷೆಯನ್ವಯ ದಕ್ಷಿಣ ಕನ್ನಡ ಜಿಲ್ಲೆ ವ್ಯಾಪ್ತಿಯಲ್ಲಿ 17900 ವಸತಿ ರಹಿತರು 30737 ನಿವೇಶನ ರಹಿತರು ಕಂಡುಬಂದಿರುತ್ತಾರೆ.<br><br>ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)ರಡಿ 2016-17 ಮತ್ತು 2017-18ನೇ ಸಾಲಿನಲ್ಲಿ ರಾಜ್ಯಾದ್ಯಂತ ನಡೆಸಿದ ಬೇಡಿಕೆ ಸಮೀಕ್ಷೆಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆ ವ್ಯಾಪ್ತಿಯಲ್ಲಿ 3741 ವಸತಿರಹಿತರು 10100 ನಿವೇಶನರಹಿತರು ಕಂಡುಬಂದಿರುತ್ತಾರೆ.<br><br>ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ನೀಡಲಾಗುವ ಗುರಿಯಡಿ ಹಂತ ಹಂತವಾಗಿ ವಸತಿ ಸೌಕರ್ಯ ಕಲ್ಪಿಸಲು ಕ್ರಮವಹಿಸಲಾಗುವುದು. |

ಸಂಖ್ಯೆ: ವಇ 56 ಹೆಚ್‌ಎಂ 2025

**(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)**
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು